**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 1637/2020**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 3**

**ದಿನಾಂಕಃ** 10.08.2026 **ಸಿಡಬ್ಲ್ಯೂ 5**

| | |
|---|---|
| ಹೆಸರು | ರಾಜೇಶ |
| ತಂದೆಯ ಹೆಸರು | ರಾಮಾಗುನಗ |
| ವಯಸ್ಸು | 50 ವರ್ಷ |
| ಉದ್ಯೋಗ | ಶಿಕ್ಷಕ |
| ವಾಸ ಸ್ಥಳ | ಬೆಳ್ಳುಡಿ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ20.08.2020 ರಂದು ಬೆಳಗ್ಗೆ 7.30 ಗಂಟೆಗೆ ನಾನು ನನ್ನ ಸ್ನೇಹಿತ ಪ್ರಭುಗೌಡರ ಮನೆಗೆ ದೇವರ ಪೂಜೆಗೆ ಹೂವನ್ನು ಕೀಳಲು ಹೋದಾಗ ಬಾಗಿಲು ತೆರೆದಿತ್ತು, ನಂತರ ನಾನು ಅನುಮಾನಗೊಂಡ ಪ್ರಭುಗೌಡರವರಿಗೆ ನಿಮ್ಮ ಮನೆಯಲ್ಲಿ ಕಳ್ಳತನವಾಗಿರುತ್ತದೆ ಎಂದು ಫೋನ್ ಮಾಡಿ ತಿಳಿಸಿರುತ್ತೇನೆ. ನಂತರ ಪ್ರಭುಗೌಡರವರು ಮರಳಿ ಹರಿಹರಕ್ಕೆ ಬಂದು ದೂರು ನೀಡಿರುತ್ತಾರೆ. ನಾನು ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ಪ್ರಭುಗೌಡರವರು ಊರಿಂದ ಬಂದು ನೋಡಿದಾಗ ಅವರ ಮನೆಯ ಮುಂದಿನ ಕಬ್ಬಿಣದ ಬಾಗಿಲಿಗೆ ಹಾಕಿದ್ದ ಇಂಟರ್ ಲಾಕ್ ಬೀಗ ಹಾಗೂ ಮನೆಯ ಬಾಗಿಲಿನ ಇಂಟರ್ ಲಾಕ್ ಬೀಗವನ್ನು ಮುರಿದು ಮನೆಯೊಳಗೆ ಪ್ರವೇಶಿಸಿ ರೂಮಿನಲ್ಲಿದ್ದ ಗಾಡ್ರೇಜ್ ಬೀಗವನ್ನು ಮುರಿದು ಅದರೊಳಗೆ ಇದ್ದ ಬಿಜೆಪಿ ಎಂದು ಇದ್ದ ಒಂದು ದೊಡ್ಡ ಉಂಗುರ 10 ಗ್ರಾಂ, 2 ಚಿಕ್ಕ ಉಂಗುರ 5 ಗ್ರಾಂ, ಬೆಂಡೋಲೆ ಸೆಟ್ 5 ಗ್ರಾಂ, 5 ಸಾವಿರ ನಗದು ಹಣ, 25 ಗ್ರಾಂ ತೂಕದ ಬಂಗಾರದ ಒಡವೆಗಳು ಹಾಗೂ 5000 ರೂ. ನಗದು ಹಣವನ್ನು ಯಾರೋ ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀ ಜಿ ಕೆ ಡಿ ವಕೀಲರಿಂದಃ

ನಾನು ಆ ದಿನ ಹೂ ಕೀಳಲು ಮನೆ ಹತ್ತಿರ ಹೋಗಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಭುಗೌಡರವರು ಊರಿಗೆ ಹೋಗುತ್ತೇನೆಂದು ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ನನ್ನನ್ನು ಠಾಣೆಗೆ ಕರೆಸಿರುತ್ತಾರೆ. ಪೋಲೀಸರು ನನ್ನ ಸಹಿ ಪಡೆದಿರುವುದಿಲ್ಲ. ನಾನು

ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ, ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರಭುಗೌಡರ ಮನೆಯಲ್ಲಿ ಯಾವುದೇ ಕಳ್ಳತನವಾಗದೇ ಇದ್ದರೂ ಸಹ ಅವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ.